KAHS610016942021

**IN THE COURT OF III ADDL CIVIL JUDGE AND JMFC**
**AT CHANNARAYAPATNA,HASSAN**
**(Presided Over by SUNEETA)**

**ಉಪಸ್ಥಿತರು** : **ಶ್ರೀಮತಿ ಸುನೀತ** (ಬಿ.ಎ.,ಎಲ್.ಎಲ್.ಬಿ.,)
3 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.

**ಸಿ.ಸಿ. ಸಂಖ್ಯೆಃ 916/2021**

**ದಿನಾಂಕಃ 29 ನೇ ಆಗಸ್ಟ್ 2023**

**ಪಿರ್ಯಾದಿದಾರರು** : ರಾಜ್ಯದ ಪರವಾಗಿ
ಹಿರೀಸಾವೆ ಪೋಲೀಸ್ ಠಾಣೆ.

**(ಸಹಾಯಕ ಸರ್ಕಾರಿ ಅಭಿಯೋಜಕರಿಂದ)**

**ವಿರುದ್ಧ**

**ಆರೋಪಿ/ಗಳು** : ಅಭಿಷೇಕ್ ಬಿನ್ ರವಿ
ಸುಮಾರು 24 ವರ್ಷ ವಯಸ್ಸು,
ಡಿ.ಸಿ.ಸಿ. ಬ್ಯಾಂಕ್ ಹತ್ತಿರ,
ಹಿರೀಸಾವೆ ಟೌನ್,
ಹಿರೀಸಾವೆ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

(ಆರೋಪಿ ಪರ ಶ್ರೀ **ಎ.ಐ.ಜೆಡ್** . , ವಕೀಲರಿಂದ)

1. ಘಟನೆ ಸಂಭವಿಸಿದ ದಿನಾಂಕ - 15-03-2021

2. ಘಟನೆ ವರದಿಯಾದ ದಿನಾಂಕ - 16-03-2021

3. ಫಿರ್ಯಾದಿದಾರರ ಹೆಸರು - ಕೆಂಪೇಗೌಡ

4. ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ - 19-08-2023

5. ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ - 19-08-2023

6. ಆರೋಪಿಸಲಾದ ಅಪರಾಧಗಳು - ಭಾ.ದಂ.ಸಂ. ಕಲಂ 504, 323, 324, 506

7. ನ್ಯಾಯಾಧೀಶರ ಅಭಿಪ್ರಾಯ - ಕೊನೆಯ ಆದೇಶದಂತೆ.

## :: **ತೀರ್ಪು**::

ಹಿರೀಸಾವೆ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಆರೋಪಿ ಭಾ.ದಂ.ಸಂ. ಕಲಂಃ 504, 323, 324, 506 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಮಾಡಿದ್ದಾರೆಂದು ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

2) **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಣೆ** :-

ಚನ್ನರಾಯಪಟ್ಟಣ ತಾಲ್ಲೂಕು, ಹಿರೀಸಾವೆ ಪೋಲೀಸ್ ಠಾಣೆ ಸರಹದ್ದಿಗೆ ಸೇರಿದ ಹಿರೀಸಾವೆ ಟೌನ್ ಪಿಳ್ಳೇಶ್ವರ ದೇವಸ್ಥಾನಕ್ಕೆ ಹೋಗುವ ಟಾರು ರಸ್ತೆಯಲ್ಲಿ ದಿಃ 15-03-

2021 ರಂದು ಮಧ್ಯಾಹ್ನ 3-30 ಗಂಟೆ ಸಮಯದಲ್ಲಿ ಚಾಸಾ-1 ಕೆಂಪೇಗೌಡರವರು ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿ ತನ್ನ ತಂದೆ ತಾಯಿಯವರಿಗೆ ಚಾಸಾ-1 ಕೆಂಪೇಗೌಡ ಸಡುಕರಿಗೆ ಗಲಾಟೆಯಾಗಿ ಕೇಸು ದಾಖಲಾಗಿರುವ ವಿಚಾರದಲ್ಲಿ ಆರೋಪಿ ಚಾಸಾ-1 ರವರ ಜೊತೆ ಏಕಾ ಏಕಿ ಜಗಳ ತೆಗೆದು , ಕೊರಳಪಟ್ಟಿ ಹಿಡಿದು , ಸೂಳೆ ಮಗನೇ ಬೋಳಿಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು , ಕೈಗಳಿಂದ ಎಡಕಣ್ಣಿಗೆ ಮೂಗಿಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿ ದೊಣ್ಣೆಯಿಂದ ಬೆನ್ನು ಮತ್ತು ಎದೆಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ಚಾಸಾ-1 ಕೆಂಪೇಗೌಡ ದೂರನ್ನು ನೀಡಿದ್ದು ಅದನ್ನು ಪಡೆದ ಠಾಣಾಧಿಕಾರಿಯಾದ ಚಾಸಾ-7 ವಿನೋದಮ್ಮ ಹಿರೀಸಾವೆ ಪೋಲೀಸ್ ಠಾಣಾ ಮೊಕದ್ದಮೆ ಸಂಖ್ಯೆ 26/2021 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ದೋಷರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**3.** ತನಿಖಾಧಿಕಾರಿಗಳು ತನಿಖೆಯನ್ನು ಪೂರ್ಣಗೊಳಿಸಿ, ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 323, 324, 504, 506 ಅಡಿಯಲ್ಲಿ ದಂಡನೀಯ ಅಪರಾಧಗಳಿಗೆ ದೋಷರೋಪಣಾ ಪಟ್ಟಿಯನ್ನು ರಚಿಸಿ, ನ್ಯಾಯಾಲಯಕ್ಕೆ ಸಲ್ಲಿಸಿದ್ದು, ನ್ಯಾಯಾಲಯವು ಆರೋಪದ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿಗೆ ನ್ಯಾಯಾಲಯದಿಂದ ಸಮನ್ಸ್ ಜಾರಿಗೊಳಿಸಿರುತ್ತದೆ.

4. ಆರೋಪಿಯು ತಮ್ಮ ಪರ ವಕೀಲರಿಂದ ನ್ಯಾಯಾಲಯಕ್ಕೆ ಹಾಜರಾಗಿ, ಜಾಮೀನಿಗಾಗಿ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯವು ಜಾಮೀನನ್ನು ಮಂಜೂರು ಗೊಳಿಸಿ, ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ಆರೋಪಿಗೆ ದೋಷರೋಪಣಾ ಪಟ್ಟಿಯನ್ನು ಹಾಗೂ ಇತರೆ ದಾಖಲಾತಿಗಳನ್ನು ನೀಡಲಾಗಿರುತ್ತದೆ.

5. ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 504, 323, 324 506 ಅಡಿಯ ಅಪರಾಧಗಳಿಗೆ ದೋಷರೋಪಣೆಯನ್ನು ರಚಿಸುವ ಮುನ್ನ ಆರೋಪಿ ಪರ ವಕೀಲರಿಂದ ವಾದವನ್ನು ಆಲಿಸಲಾಯಿತು. ವಿಚಾರಣೆಗೆ ಒಳಪಡಿಸುವ ಮುನ್ನ ಆರೋಪಿಯನ್ನು ಪ್ರಕರಣದಿಂದ ವಿಮೋಚನೆಗೊಳಿಸುವ ಯಾವುದೇ ಸಕಾರಣಗಳು ನ್ಯಾಯಾಲಯಕ್ಕೆ ಕಂಡು ಬರದ ಕಾರಣ, ಆರೋಪಿ ವಿರುದ್ಧ ದೋಷರೋಪಣೆಯನ್ನು ರಚಿಸಲಾಯಿತು.

6. ಆರೋಪಿ ವಿರುದ್ಧ ದೋಷರೋಪಣೆ ರಚಿಸಿ, ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ, ವಿವರಿಸಿದ್ದು ಆರೋಪಿಯು ತಾವು ತಪ್ಪು ಮಾಡಿರುವುದಿಲ್ಲವೆಂದು, ವಿಚಾರಣೆಯಾಗಬೇಕೆಂದು ಉತ್ತರಿಸಿರುತ್ತಾರೆ.

**7.** ಅಭಿಯೋಜನೆಯು ಆರೋಪಿ ವಿರುದ್ಧ ಮಾಡಿರುವ ಆಪಾದನೆಯ ಸಲುವಾಗಿ, ಪಿರ್ಯಾದಿಯು ಪ್ರಾಸಾ-1 ರಂತೆ ಸಾಕ್ಷ್ಯ ನುಡಿದಿದ್ದು, ನಿಶಾನೆ ಪಿ-1 ನ್ನು

ಗುರುತಿಸಿರುತ್ತಾರೆ. ಅಭಿಯೋಜನೆಯವರು ಇನ್ನುಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡುವಂತೆ ಮನವಿ ಮಾಡಿಕೊಂಡಿದ್ದು, ಆದರೆ ಅಭಿಯೋಜನೆಯು ವಿಚಾರಣೆಗೊಳಪಡಿಸಿದ ಪ್ರಾಸಾ-1 ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಇನ್ನುಳಿದ ಸಾಕ್ಷಿದಾರರನ್ನು ವಿಚಾರಣೆಯಿಂದ ಅಭಿಯೋಜನೆಯ ಪ್ರಕರಣಕ್ಕೆ ಯಾವುದೇ ರೀತಿಯಿಂದಲೂ ಸಹಾಯಕವಾಗುವುದಿಲ್ಲವೆಂದು ಇನ್ನುಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಬೇಕೆಂಬ ಅಭಿಯೋಜಕರ ಪ್ರಾರ್ಥನೆಯನ್ನು ತಿರಸ್ಕರಿಸಲಾಯಿತು. ಅಭಿಯೋಜನೆಯ ಪರವಾಗಿ ಸಾಕ್ಷ್ಯ ನೀಡಿದ ಪ್ರಾಸಾ-1 ರವರ ಸಾಕ್ಷ್ಯದಲ್ಲಿ ಆರೋಪಿ ವಿರುದ್ಧ ಯಾವುದೇ ದೋಷಾರೋಪಣಾ ಸಾಕ್ಷ್ಯವು ಕಂಡುಬರುವುದಿಲ್ಲವಾದ್ದರಿಂದ ಅಪರಾಧ ಪ್ರಕ್ರಿಯಾ ಸಂಹಿತೆ ಕಲಂಃ 313 ರಡಿಯಲ್ಲಿ ಆರೋಪಿ ಹೇಳಿಕೆ ದಾಖಲಿಸಿಕೊಳ್ಳುವುದನ್ನು ಕೈ ಬಿಡಲಾಯಿತು.

**8.** ಅಭಿಯೋಜನೆಯ ಪರ ಹಾಗೂ ಆರೋಪಿ ಪರ ವಕೀಲರ ವಾದಗಳನ್ನು ಕೇಳಲಾಯಿತು.

**9.** ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ.

**ಅಂಶ :1** ದಿನಾಂಕ 15-03-2021 ರಂದು ಮಧ್ಯಾಹ್ನ 3-30 ಗಂಟೆ ಸಮಯದಲ್ಲಿ ಹಿರೀಸಾವೆ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಹಿರೀಸಾವೆ ಟೌನ್ ಪಿಳ್ಳೇಶ್ವರ ದೇವಸ್ಥಾನಕ್ಕೆ

ಹೋಗುವ ಟಾರ್ ರಸ್ತೆಯಲ್ಲಿ ಚಾಸಾ–1 ಕೆಂಪೇಗೌಡರು ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿಯಾದ ನೀವು ನಿಮ್ಮ ತಂದೆ ತಾಯಿಯವರಿಗೆ ಚಾಸಾ–1 ರವರ ಸಡುಕನಿಗೆ ಗಲಾಟೆಯಾಗಿ ಕೇಸು ದಾಖಲಾಗಿರುವ ವಿಚಾರದಲ್ಲಿ ಆರೋಪಿಯಾದ ನೀವು ಚಾಸಾ–1 ರವರ ಜೊತೆ ಏಕಾಏಕಿ ಜಗಳ ತೆಗೆದು ಕೊರಳಪಟ್ಟಿ ಹಿಡಿದು ಸೂಳೆ ಮಗನೇ, ಬೋಳಿಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿ ಮತ್ತು ನೆಮ್ಮದಿಗೆ ಭಂಗವನ್ನುಂಗು ಮಾಡವುದಕ್ಕಾಗಿ ಉದ್ದೇಶಪೂರ್ವಕವಾಗಿ ಉದ್ರೇಖಿಸಿದ್ದೀರಿ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ. **504** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದಾರೆಂದು ಅಭಿಯೋಜನೆಯವರು ನಿಸ್ಸಂಶಯವಾಗಿ ರುಜುವಾತು ಪಡಿಸಿರುತ್ತಾರೆಯೇ ?

**ಅಂಶಃ 2** ಮೇಲ್ಕಂಡ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿಯಾದ ನೀವು ಚಾಸಾ–1 ರವರೊಂದಿಗೆ ಜಗಳ ತೆಗೆದು ಕೈಗಳಿಂದ ಎಡಕಣ್ಣಿಗೆ, ಮೂಗಿಗೆ ಹೊಡೆದು ಸ್ವಇಚ್ಛೆಯಿಂದ

ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ. **323** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದಾರೆಂದು ಅಭಿಯೋಜನೆಯವರು ನಿಸ್ಸಂಶಯವಾಗಿ ರುಜುವಾತು ಪಡಿಸಿರುತ್ತಾರೆಯೇ ?

**ಅಂಶಃ 3** ಮೇಲ್ಕಂಡ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿಯಾದ ನೀವು ಚಾಸಾ–1 ರವರೊಂದಿಗೆ ಜಗಳ ತೆಗೆದು ಚಾಸಾ–1 ರವರಿಗೆ ಮಾರಕಾಸ್ತ್ರವಾದ ದೊಣ್ಣೆಯಿಂದ ಬೆನ್ನು ಮತ್ತು ಎದೆಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **324 ಸಹವಾಚಕ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದಾರೆಂದು ಅಭಿಯೋಜನೆಯವರು ನಿಸ್ಸಂಶಯವಾಗಿ ರುಜುವಾತು ಪಡಿಸಿರುತ್ತಾರೆಯೇ ?

**ಅಂಶಃ 4** ಮೇಲ್ಕಂಡ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿಯಾದ ನೀವು ಚಾಸಾ–1 ರವರೊಂದಿಗೆ ಜಗಳ ತೆಗೆದು ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಉಂಟು

ಮಾಡಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **506** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದಾರೆಂದು ಅಭಿಯೋಜನೆಯವರು ನಿಸ್ಸಂಶಯವಾಗಿ ರುಜುವಾತು ಪಡಿಸಿರುತ್ತಾರೆಯೇ ?

**ಅಂಶ – 5**: ಯಾವ ಆದೇಶ ?

10. ಈ ಕೆಳಕಂಡ ಕಾರಣಗಳಿಂದಾಗಿ ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿರುತ್ತದೆ.

ಅಂಶ : 1 ರಿಂದ 4 – **ನಕಾರಾತ್ಮಕವಾಗಿ**

ಅಂಶ : 5 – ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ,

## : : ಕಾರಣಗಳು : :

11. **ಅಂಶ ಸಂಖ್ಯೆ– 1 ರಿಂದ 4**: ಸದರಿ ಅಂಶಗಳು ಒಂದಕ್ಕೊಂದು ಪರಸ್ಪರ ಪೂರಕವಾಗಿರುವುದರಿಂದ ಚರ್ಚೆಯ ವೇಳೆ ಅಂಶಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

12. ಆರೋಪಿ ವಿರುದ್ಧ ಮಾಡಲಾಗಿರುವ ಆರೋಪವನ್ನು ರುಜುವಾತುಪಡಿಸುವ ಹೊಣೆಯು ಅಭಿಯೋಜನೆಯ ಮೇಲಿದ್ದು, ಪ್ರಸ್ತುತ ಪ್ರಕರಣದಲ್ಲಿ

ಅಭಿಯೋಜನೆಯ ನಿರ್ಧಿಷ್ಟ ಆರೋಪವೇನೆಂದರೆ, ಚನ್ನರಾಯಪಟ್ಟಣ ತಾಲ್ಲೂಕು, ಹಿರೀಸಾವೆ ಪೋಲೀಸ್ ಠಾಣೆ ಸರಹದ್ದಿಗೆ ಸೇರಿದ ಹಿರೀಸಾವೆ ಟೌನ್ ಪಿಳ್ಳೇಶ್ವರ ದೇವಸ್ಥಾನಕ್ಕೆ ಹೋಗುವ ಟಾರು ರಸ್ತೆಯಲ್ಲಿ ದಿಃ 15-03-2021 ರಂದು ಮಧ್ಯಾಹ್ನ 3-30 ಗಂಟೆ ಸಮಯದಲ್ಲಿ ಚಾಸಾ-1 ಕೆಂಪೇಗೌಡರವರು ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿ ತನ್ನ ತಂದೆ ತಾಯಿಯವರಿಗೆ ಚಾಸಾ-1 ಕೆಂಪೇಗೌಡ ಸಡುಕರಿಗೆ ಗಲಾಟೆಯಾಗಿ ಕೇಸು ದಾಖಲಾಗಿರುವ ವಿಚಾರದಲ್ಲಿ ಆರೋಪಿ ಚಾಸಾ-1 ರವರ ಜೊತೆ ಏಕಾ ಏಕಿ ಜಗಳ ತೆಗೆದು, ಕೊರಳಪಟ್ಟಿ ಹಿಡಿದು, ಸೂಳೆ ಮಗನೇ ಬೋಳಿಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು , ಕೈಗಳಿಂದ ಎಡಕಣ್ಣಿಗೆ ಮೂಗಿಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿ ದೊಣ್ಣೆಯಿಂದ ಬೆನ್ನು ಮತ್ತು ಎದೆಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂಬುದಾಗಿ ಇರುತ್ತದೆ.

**13.** ಅಭಿಯೋಜನೆಯು ಆರೋಪಿ ವಿರುದ್ಧ ಆಪಾದಿಸಿರುವ ಆರೋಪವನ್ನು ಸಾಬೀತುಪಡಿಸುವುದಕ್ಕಾಗಿ ಚಾಸಾ-1 ರವರು ಅಭಿಯೋಜನೆಯ ಸಾಕ್ಷ್ಯ ವಿಚಾರಣೆಯ ಪ್ರಯುಕ್ತ ಪಿರ್ಯಾದಿ ಪ್ರಾಸಾ-1 ರಂತೆ ಸಾಕ್ಷ್ಯ ನುಡಿದಿದ್ದು, ತಮ್ಮ ಸಾಕ್ಷ್ಯದಲ್ಲಿ ಆರೋಪಿ ಮತ್ತು ನನ್ನ ನಡುವೆ ಯಾವುದೇ ಗಲಾಟೆ ಆಗಿಲ್ಲ, ಆರೋಪಿ ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ. ಆರೋಪಿಯು ಕೈಯಿಂದ ಮತ್ತು ದೊಣ್ಣೆಯಿಂದ ನನಗೆ ಹಲ್ಲೆ ಮಾಡಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿರುವುದಿಲ್ಲ. ನಾನು ಈ ಸಂಬಂಧ ಯಾವುದೇ ಚಿಕಿತ್ಸೆ

ಪಡೆದುಕೊಂಡಿಲ್ಲ. ನಿಪಿ–1 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ, ಪೋಲೀಸರ ಹೇಳಿಕೆಯ ಮೇರೆಗೆ ನಾನು ದೂರಿಗೆ ಸಹಿಯನ್ನು ಹಾಕಿರುತ್ತೇನೆ ಎಂದು ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

14. ಸರ್ಕಾರಿ ಅಭಿಯೋಜಕರು ಇವರನ್ನು ಪಾಟೀಸವಾಲಿಗೆ ಒಳಪಡಿಸಿದಾಗ ಇವರು ತಮ್ಮ ಪಾಟೀಸವಾಲಿನಲ್ಲಿ ದಿಃ 15–03–2021 ರಂದು ಮಧ್ಯಾಹ್ನ 3–30 ಗಂಟೆ ಸಮಯದಲ್ಲಿ ನಾನು ಹಿರೀಸಾವೆ ಟೌನ್ ಪಿಳ್ಳೇಶ್ವರ ದೇವಸ್ಥಾನಕ್ಕೆ ಹೋಗುವ ಟಾರು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿ ನನ್ನ ತಂದೆ ತಾಯಿ ಮತ್ತು ನನ್ನ ಸಡುಕನಿಗೆ ಗಲಾಟೆಯಾಗಿರುವ ವಿಚಾರದಲ್ಲಿ ಆರೋಪಿಯು ನನ್ನೊಂದಿಗೆ ಏಕಾ ಏಕಿ ಜಗಳ ತೆಗೆದು ಕೊರಳಪಟ್ಟಿ ಹಿಡಿದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ದೊಣ್ಣೆಯಿಂದ ಬೆನ್ನು ಮತ್ತು ಎದೆಗೆ ಹೊಡೆದು ನೋವುಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಇನ್ನೊಂದು ಬಾರಿ ಸಿಕ್ಕರೆ ನಿನ್ನನ್ನು ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ನಂತರ ಅಲ್ಲೇ ಇದ್ದ ಚಾಸಾ–2 ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಸಂಬಂಧ ನಾನು ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಓದಿ ಹೇಳಿದಂತೆ ನಿಪಿ–1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯೊಂದಿಗೆ ರಾಜಿ ಮಾಡಿಕೊಂಡಿರುವುದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**15.** ಅಭಿಯೋಜನೆಯವರು ಫ್ರಾಸಾ-1 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಿದ್ದಾದರೂ ಪ್ರಕರಣಕ್ಕೆ ಪೂರಕವಾದ ಯಾವುದೇ ಅಂಶಗಳನ್ನು ಹೊರತಂದಿರುವುದಿಲ್ಲ. ಫ್ರಾಸಾ-1 ರವರು ಅಭಿಯೋಜನೆಯವರು ಪಾಟೀಸವಾಲಿನಲ್ಲಿ ಸೂಚಿಸಿದ ಎಲ್ಲಾ ಸಲಹೆಗಳನ್ನು ಅಲ್ಲಗಳೆದು, ಫ್ರಾಸಾ-1 ರವರು ತಮ್ಮ ಹೇಳಿಕೆಯನ್ನು ನಿಪಿ-1 ಎಂದು ತದಾನುಸಾರವಾಗಿ ಗುರುತಿಸಿ, ತಾವು ಹಾಗೂ ಆರೋಪಿಗಳು ರಾಜಿ ಮಾಡಿಕೊಂಡಿರುತ್ತೇವೆಂದು ಒಪ್ಪಿಕೊಳ್ಳುವ ಮೂಲಕ ಅಭಿಯೋಜನೆಯವರ ಎಲ್ಲಾ ಸಲಹೆಗಳನ್ನು ಅಲ್ಲಗಳೆದು ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ.

**16.** ಫ್ರಾಸಾ-1 ರವರು ಪ್ರಕರಣದ ಪಿರ್ಯಾದಿಯಾಗಿದ್ದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರಕರಣದ ಉಳಿದ ಸಾಕ್ಷಿದಾರರು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದರೂ ಸಹ ಅವುಗಳಿಂದ ಅಭಿಯೋಜನೆಗೆ ಯಾವುದೇ ಉಪಯುಕ್ತಕರವಾಗುವುದಿಲ್ಲ. ಆದ್ದರಿಂದ ಪ್ರಕರಣದ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ನ್ಯಾಯಾಲಯದ ಅಮೂಲ್ಯವಾದ ಸಮಯ ವ್ಯಯವಾಗುವುದಲ್ಲದೆ ಅಭಿಯೋಜನೆಗೂ ಯಾವುದೇ ರೀತಿ ಉಪಯೋಗವಾಗುವುದಿಲ್ಲ. ಈ ಕಾರಣಕ್ಕಾಗಿ ಪ್ರಕರಣದ ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡುವುದು ಸಮಂಜಸವಲ್ಲವೆಂದು ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡುವ ಬಗ್ಗೆ ಅಭಿಯೋಜಕರ ಕೋರಿಕೆಯನ್ನು ತಿರಸ್ಕರಿಸಲಾಯಿತು. ಈ ಮೇಲೆ ಚರ್ಚಿಸಿರುವಂತೆ

ಅಭಿಯೋಜನೆಯು ಆರೋಪಿ ವಿರುದ್ಧ ಆಪಾದಿಸಿರುವ ಆರೋಪವನ್ನು ಸಾಬೀತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುತ್ತದೆ ಎಂಬ ಸ್ಪಷ್ಟ ಅಭಿಪ್ರಾಯಕ್ಕೆ ಬಂದು **ಅಂಶ ಸಂಖ್ಯೆ 1 ರಿಂದ 4 ನ್ನು ನಕಾರಾತ್ಮಕವಾಗಿ** ಉತ್ತರಿಸಲಾಗಿರುತ್ತದೆ.

**17. ಅಂಶ ಸಂಖ್ಯೆ – 5–** ಅಂಶ 1 ರಿಂದ 4 ರಲ್ಲಿ ಚರ್ಚಿಸಿರುವ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶ ಮಾಡಲಾಗಿರುತ್ತದೆ.

## :: **ಆದೇಶ** ::

ದಂ.ಪ್ರ.ಸಂ. ಕಲಂಃ 248(1) ರನ್ವಯ ಆರೋಪಿಯನ್ನು ಭಾ.ದಂ.ಸಂ. ಕಲಂಃ 504, 323, 324, 506 ರಡಿಯಲ್ಲಿ ದಂಡಿಸಬಹುದಾದ ಅಪರಾಧಗಳಿಂದ ನಿರ್ದೋಷಿಯೆಂದು ಘೋಷಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿ ಮತ್ತು ಆತನ ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಿದೆ.

ಈ ಪ್ರಕರಣದಲ್ಲಿ ತನಿಖಾ ಕಾಲದಲ್ಲಿ ಹಾಜರುಪಡಿಸಲಾದ ಒಂದು ಮರದ ದೊಣ್ಣೆ ಮೌಲ್ಯರಹಿತವಾದ ಕಾರಣ ಮೇಲ್ಮನವಿ ಅವಧಿ ನಂತರ ನಾಶ ಪಡಿಸಲು ಆದೇಶಿಸಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಹೇಳಿ, ಅವರಿಂದ ಕಂಪ್ಯೂಟರ್ ನಲ್ಲಿ ಟೈಪ್ ಮಾಡಿಸಿ, ನನ್ನಿಂದ ತಿದ್ದುಪಡಿ ಮಾಡಿ ಇಂದು ದಿನಾಂಕಃ 29 **ನೇ ಆಗಸ್ಟ್ 2023** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

(ಸುನೀತ )
3 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ., ಚನ್ನರಾಯಪಟ್ಟಣ.

**: : ಪರಿಚ್ಛೇದ : :**

**1. ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ.**

ಫ್ರಾಸಾ–1 – ಕೆಂಪೇಗೌಡ

**2. ಅಭಿಯೋಜನೆಯ ಪರ ಗುರುತಿಸಲಾದ ದಸ್ತಾವೇಜುಗಳ ಪಟ್ಟಿ**

ನಿಪಿ–1 – ದೂರು

ನಿಪಿ–1(ಎ) – ಫ್ರಾಸಾ–1 ರವರ ಸಹಿ

**3. ಆರೋಪಿ/ಗಳ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ**

– ಇಲ್ಲ–

**4. ಆರೋಪಿ/ಗಳ ಪರ ಗುರುತಿಸಲಾದ ದಸ್ತಾವೇಜುಗಳ ಪಟ್ಟಿ**

–ಇಲ್ಲ –

**5. ಅಭಿಯೋಜನೆಯವರ ಪರ ಹಾಜರುಪಡಿಸಿದ ಮುದ್ದೆಮಾಲುಗಳುಃ–**

–ಇಲ್ಲ–

(ಸುನೀತ )

3 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.